### ಅಧ್ಯಯನಗಳ ಅಡಿಗೆರೆ

ಮದುವೆಯ ಬಂಧ ಎಂಬುದು ಒಂದೆರಡು ವರ್ಷಗಳ ನಂತರ ಕಂದಮ್ಮನನ್ನು ಬೆಸೆಯುವ ಅನುಬಂಧ ಎಂಬುದನ್ನು ಪತಿ–ಪತ್ನಿಯರು ನಿರ್ಧರಿಸುತ್ತಾರೆ. ಈ ನಿರ್ಧಾರದ ಬಳಿಕ ಅದನ್ನು ಕಾರ್ಯರೂಪಕ್ಕಿಳಿಸಲು ಪ್ರಯತ್ನಿಸುತ್ತಾರೆ. ನಿರೀಕ್ಷಿತ ಫಲಿತಾಂಶ ದೊರೆಯದೇ ಇದ್ದಾಗ ನಿರಾಶೆ ಆವರಿಸಿದರೂ ವೈದ್ಯರ ಮೊರೆ ಹೋಗುವುದು ಅನಿವಾರ್ಯವಾಗುತ್ತದೆ. ಗರ್ಭ ಕಟ್ಟಲು ಅಗತ್ಯವಿರುವ ತಪಾಸಣೆ ನಡೆಯುತ್ತದೆ. ಪತಿ–ಪತ್ನಿ ಇಬ್ಬರೂ ವಿವಿಧ ವೈದ್ಯಕೀಯ ಪರೀಕ್ಷೆಗೆ ಒಳಗಾಗಬೇಕಾಗುತ್ತದೆ.

ಪ್ರಸ್ತುತ, ಪುರುಷರಲ್ಲಿ ಸಂತಾನಹೀನತೆ ಸಮಸ್ಯೆಯ ಪ್ರಮಾಣವು ಹೆಚ್ಚುತ್ತಿದೆ. ಇದನ್ನು ಕೆಲವು ಅಧ್ಯಯನ– ಸಂಶೋಧನೆಗಳು ಕೂಡ ಸಾಬೀತುಪಡಿಸಿವೆ. ಅಲ್ಲದೆ ಪುರುಷ ಸಂತಾನಹೀನತೆಯ ಪ್ರಮುಖ ಅಂಶಗಳನ್ನು ಈ ಅಧ್ಯಯನ ವರದಿ ಬಹಿರಂಗಪಡಿಸಿದೆ.


ಪುರುಷರಲ್ಲಿ ವೀರ್ಯದ ಸಮಸ್ಯೆ ಎಂಬುದು ಸಂತಾನಹೀನತೆ ಸಮಸ್ಯೆಯಷ್ಟೇ ಆಗಿರುವುದಿಲ್ಲ. ವೀರ್ಯಾಣುವಿನ ಸಂಖ್ಯೆಯಲ್ಲಿ ಕೊರತೆ, ಗುಣಮಟ್ಟದ ತೊಂದರೆ – ಇವೆಲ್ಲವೂ ಒಟ್ಟಾರೆ ದೈಹಿಕ ಆರೋಗ್ಯದ ಸಮಸ್ಯೆಗಳನ್ನೂ ಬಿಂಬಿಸುತ್ತವೆ. ಶೀಘ್ರ ಪರೀಕ್ಷೆ ಮುಂಬರುವ ಸಮಸ್ಯೆಯನ್ನು ತಪ್ಪಿಸುತ್ತದೆ ಮಾತ್ರವಲ್ಲ, ಗಂಭೀರ ಪರಿಣಾಮಗಳನ್ನು ತಡೆಯುತ್ತದೆ.

ಭಾರತದಲ್ಲಿ ಫಲವತ್ತತೆ ಕೊರತೆ ನಿಟ್ಟಿನಲ್ಲಿ ಪುರುಷರ ಸಮಸ್ಯೆ ಮಹಿಳೆಯರಿಗಿಂತ ಐದು ಪಟ್ಟು ಹೆಚ್ಚು. ಇದಕ್ಕೆ ಪ್ರಮುಖ ಕಾರಣ ಬೊಜ್ಜು, ಕೊಲೆಸ್ಟ್ರಾಲ್, ಮಧುಮೇಹ, ಧೂಮಪಾನ, ಮದ್ಯಪಾನದಂತಹ ವ್ಯಸನಗಳು ಪುರುಷರಲ್ಲಿ ಹೆಚ್ಚುತ್ತಿರುವುದು. ಬಂಜೆತನ ಅನುಭವಿಸುತ್ತಿರುವ ಹೆಚ್ಚಿನ ಪುರುಷರಲ್ಲಿ ಒಂದು ಎಂಎಲ್ ವೀರ್ಯದಲ್ಲಿ ವೀರ್ಯಾಣುಗಳ ಸಂಖ್ಯೆ 60 ಮಿಲಿಯನ್‌ನಿಂದ 20 ಮಿಲಿಯನ್‌ಗೆ ಇಳಿದಿರುವುದು ಕೂಡ ಈ ಸಮಸ್ಯೆಗೆ ಕಾರಣ ಎಂಬುದು ವೈದ್ಯಲೋಕದ ಕಳವಳ.

ದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆ (AIIMS) ಇತ್ತೀಚೆಗೆ ನಡೆಸಿದ ಅಧ್ಯಯನವೂ ಪುರುಷರ ವೀರ್ಯದಲ್ಲಿ ವೀರ್ಯಾಣುಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿರುವುದನ್ನು ಪತ್ತೆ ಹಚ್ಚಿದೆ. ಭಾರತದಲ್ಲಿ 27.5 ದಶಲಕ್ಷ ದಂಪತಿಗಳು ಸಂತಾನಪ್ರಾಪ್ತಿಗೆ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂಬುದು ಕೂಡ ಆತಂಕದ ವಿಚಾರವೇ ಆಗಿದೆ.

### ಪುರುಷರಲ್ಲಿ ಹೆಚ್ಚುತ್ತಿದೆಯೇಕೆ ಸಮಸ್ಯೆ?

ಆಕ್ಸ್‌ಫರ್ಡ್ ವಿಶ್ವವಿದ್ಯಾಲಯ ಹೊರತರುವ ‘ಹ್ಯೂಮನ್ ರಿಪ್ರೊಡಕ್ಷನ್’ ನಿಯತಕಾಲಿಕ ಪುರುಷರಲ್ಲಿ ವೀರ್ಯಾಣುಗಳ ಸಂಖ್ಯೆ ಕ್ಷೀಣಿಸುತ್ತಿರುವ ಬಗ್ಗೆ ಕೈಗೊಂಡ ಅಧ್ಯಯನದ ಸಾರವನ್ನು ಇತ್ತೀಚೆಗೆ ಪ್ರಕಟಿಸಿದೆ. ಪುರುಷರ ಸಂತಾನೋತ್ಪತ್ತಿ ಸಾಮರ್ಥ್ಯ ಕುಗ್ಗುವ ಪ್ರಕ್ರಿಯೆ ನಿರಂತರವಾಗಿ ಮುಂದುವರೆದರೆ, ಮುಂದೆ ಗಂಭೀರ ಪರಿಸ್ಥಿತಿ ನಿರ್ಮಾಣವಾಗಲಿದೆ. 1973ರಿಂದ 2011ರವರೆಗೂ, ಹಲವು ದೇಶಗಳ ಪುರುಷರಲ್ಲಿ ವೀರ್ಯದ



‘ಮಾರ್ಫಾಲಜಿ’ ಮೂಲಕ ವೀರ್ಯಗಳ ಸಂಖ್ಯೆ ಮತ್ತು ವಿಶ್ಲೇಷಣೆ ಸಾಧ್ಯ

> ಪುರುಷರು ತಮ್ಮ ಲೈಂಗಿಕ ಸಮಸ್ಯೆಗಳ ಪರಿಹಾರಕ್ಕೆ ಹಿಂಜರಿಯುವುದೇ ಕಾರಣ. ಇದು ಕೌಟುಂಬಿಕ ಸಾಮರಸ್ಯ ಹದಗೆಡಿಸುತ್ತಿದೆ.
> -ಡಾ. ಅವಿವಾ ಪಿಂಟೊ,
> ವೈದ್ಯಕೀಯ ನಿರ್ದೇಶಕಿ,
> ನೋವಾ ಐವಿಎಫ್, ಬೆಂಗಳೂರು



# ನಿಮಿರು ದೌರ್ಬಲ್ಯ; ಪರಿಹಾರ ಏನು?

ಭಾರತೀಯರಲ್ಲಿ ಪ್ರತಿ 10 ಪುರುಷರಲ್ಲಿ ಒಬ್ಬರು ನಿಮಿರು ದೌರ್ಬಲ್ಯದಿಂದಾಗಿ ಮಕ್ಕಳಾಗದೇ ಸಂಕಟ ಅನುಭವಿಸುತ್ತಿದ್ದಾರೆ ಎಂಬುದನ್ನು ಇತ್ತೀಚೆಗೆ ನಡೆಸಿದ ವೈದ್ಯಕೀಯ ಸಮೀಕ್ಷೆ ಬಹಿರಂಗಪಡಿಸಿದೆ. ಅತಿ ಒತ್ತಡದ ಕೆಲಸ, ಮಧ್ಯ ವಯಸ್ಸಿಗೇ ಬರುವ ಮಧುಮೇಹ, ರಕ್ತದೊತ್ತಡ, ಬದಲಾದ ಜೀವನಶೈಲಿ, ಆಹಾರಕ್ರಮಗಳಿಂದ ಉಂಟಾಗುವ ಸ್ಥೂಲಕಾಯ ಮುಂತಾದ ಸಮಸ್ಯೆಗಳಿಂದ ಪುರುಷರಲ್ಲಿ ಲೈಂಗಿಕತೆ ಸಂಬಂಧಿಸಿದ ಸಮಸ್ಯೆಗಳು ಹೆಚ್ಚಾಗುತ್ತಿವೆ. ಅಧ್ಯಯನದ ಪ್ರಕಾರ ಪುರುಷರಲ್ಲಿ ಪ್ರಿಮೆಚೂರು ಇಜಾಕ್ಯುಲೇಷನ್ (ಪಿಎಮ್‌ಇ) ಮತ್ತು ಇರೆಕ್ಟಲ್ ಡಿಸ್‌ಫಂಕ್ಷನ್ (ಇಡಿ) ಸಮಸ್ಯೆಗಳು ಹೆಚ್ಚಾಗುತ್ತಿವೆ ಎಂಬುದು ಗೊತ್ತಾಗಿದೆ. ಇದರ ಪರಿಣಾಮವಾಗಿ ಲೈಂಗಿಕ ಜೀವನದಲ್ಲಿ ತೃಪ್ತಿ ಕಾಣದೆ ವಿಚ್ಛೇದನ ಪ್ರಕರಣಗಳೂ ಹೆಚ್ಚಾಗುತ್ತಿವೆ. ಪುರುಷರು ತಮ್ಮ ಲೈಂಗಿಕ ಸಮಸ್ಯೆಗಳಿಗೆ ವೈದ್ಯಕೀಯ ಪರಿಹಾರ ಕಂಡುಕೊಳ್ಳಲು ಹಿಂಜರಿಯುತ್ತಿರುವುದು ಕೂಡ ಕೌಟುಂಬಿಕ ಸಾಮರಸ್ಯ ಹದಗೆಡಲು ಕಾರಣವಾಗುತ್ತಿವೆ.

ಸಂಭೋಗದಲ್ಲಿ ನಿಮಿರು ಎಷ್ಟು ಇರಬೇಕೊ ಅಷ್ಟು ಇರದಿದ್ದರೆ ಸಂತುಷ್ಟತೆ ಇರುವುದಿಲ್ಲ. ಇದಕ್ಕೆ ವ್ಯಕ್ತಿಯನ್ನು ಸಂಪೂರ್ಣ ಪರೀಕ್ಷೆ ಮಾಡಿ ಔಷಧಿ ನೀಡಬೇಕು, ಸೂಕ್ತವಾದ ಸಲಹೆ (ಮೆಡಿಕಲ್ ಕೌನ್ಸೆಲಿಂಗ್) ಕೊಡಬೇಕಾಗುತ್ತದೆ. ಈ ಸಮಸ್ಯೆ ಇದ್ದ ಹತ್ತರಲ್ಲಿ ಒಂಬತ್ತು ಮಂದಿಯನ್ನು ಔಷಧಿ ಮೂಲಕ, ಸಲಹೆ ಮೂಲಕ ಸರಿಪಡಿಸಬಹುದು. ಆದರೆ ಒಬ್ಬರಿಗೆ ಶಸ್ತ್ರಚಿಕಿತ್ಸೆ ಬೇಕಾಗುತ್ತದೆ.

ಪುರುಷರು ತಮ್ಮ ಲೈಂಗಿಕ ಆರೋಗ್ಯದ ಬಗ್ಗೆ ತೋರುವ ಅನಾಸಕ್ತಿಯಿಂದಾಗಿ ಸರಿಯಾದ ಸಮಯದಲ್ಲಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುತ್ತಿಲ್ಲ. ಇದರಿಂದ ಪುರುಷರಲ್ಲಿ ನಿಮಿರು ದೌರ್ಬಲ್ಯ ಬೆಳಕಿಗೆ ಬರುವುದೇ ಇಲ್ಲ. 35 ವರ್ಷಕ್ಕಿಂತ ಮೇಲ್ಪಟ್ಟ ಅನೇಕ ಪುರುಷರು ಮಧುಮೇಹ, ರಕ್ತದೊತ್ತಡ ಸಮಸ್ಯೆಯಿಂದ ಬಳಲುತ್ತಿರುವುದೂ ಈ ಸಮಸ್ಯೆ ಉಲ್ಬಣಗೊಳ್ಳಲು ಕಾರಣ.

ಭಾರತದ ಅಂಕಿ ಅಂಶ ತೆಗೆದುಕೊಂಡರೆ 10 ಜನರಲ್ಲಿ 9 ಮಂದಿಗೆ ಈ ಸಮಸ್ಯೆ ಇದೆ. ಮಧುಮೇಹ, ರಕ್ತದೊತ್ತಡ, ಹೃದಯ ಸಂಬಂಧಿ ಕಾಯಿಲೆ, ಮಾನಸಿಕ ಒತ್ತಡ ಹೆಚ್ಚುತ್ತಿರುವುದರಿಂದ ಸಂಭೋಗದಲ್ಲಿ ತೊಂದರೆ ಅನುಭವಿಸುವ ರೋಗಿಗಳೂ ದಿನೇದಿನೇ ಹೆಚ್ಚುತ್ತಿದ್ದಾರೆ. ಕೆಲಸದ ಒತ್ತಡದಿಂದಾಗಿ ಮಾನಸಿಕ ತೊಂದರೆಯೂ ಕೆಲವರಲ್ಲಿ ಇರುವುದು ಗಮನಕ್ಕೆ ಬಂದಿದೆ. ಗಂಡ ಹೆಂಡತಿ ಮಧ್ಯೆ ಸಮನ್ವಯದ ಕೊರತೆಯೂ ಕಂಡುಬರುತ್ತಿದೆ.

ಪುರುಷರಲ್ಲಿ ಲೈಂಗಿಕ ಸಮಸ್ಯೆ ಹೆಚ್ಚುತ್ತಿರುವುದಕ್ಕೆ ಪ್ರಮುಖವಾಗಿ ನಾಲ್ಕು ವೈದ್ಯಕೀಯ ಕಾರಣಗಳಿವೆ. ಇರೆಕ್ಟಲ್ ಡಿಸ್‌ಫಂಕ್ಷನ್, ಪ್ರಿಮೆಚ್ಯೂರ್ ಇಜಾಕ್ಯುಲೇಷನ್, ಪೈರೊನಿ ಡಿಸೀಸ್, ಮೈಕ್ರೊಪೆನಿಸ್. ಇಂಜೆಕ್ಷನ್, ನಡವಳಿಕೆ ಚಿಕಿತ್ಸೆ, ಶಸ್ತ್ರಚಿಕಿತ್ಸೆ, ಹಾರ್ಮೋನ್ ಥೆರಪಿ ಮುಂತಾದ ಸೂಕ್ತ ಚಿಕಿತ್ಸೆ ಮೂಲಕ ಪರಿಹಾರ ಕಂಡುಕೊಳ್ಳಬಹುದು.